**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ ಉತ್ತರ ಕನ್ನಡ : ಕಾರವಾರ**

**ಸ್ಪೆಷಲ್ ಕೇಸ್ ನಂ. 8/2014**

**ದೋ.ಸಾ. : 17 ಫ್ರಾ.ಸಾ. : 16**

ಸಾಕ್ಷಿಯ ಹೆಸರು : ಎಂ.ಕೆ. ವಿಜಯಕುಮಾರ ಶೆಟ್ಟಿ
ತಂದೆಯ ಹೆಸರು : ಎಂ.ಆರ್. ಕೃಷ್ಣಯ್ಯ ಶೆಟ್ಟಿ
ವಯಸ್ಸು : 72 ವರ್ಷ
ಉದ್ಯೋಗ : ನಿವೃತ್ತ ವ್ಯವಸ್ಥಾಪಕರು , ವಿಜಯ ಬ್ಯಾಂಕ್ ಅಂಕೋಲಾ
ವಾಸ : ಉಡುಪಿ

**ದಿನಾಂಕಃ 07-12-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದ**

1. ನಾನು ಮೇ 2009 ರಿಂದ 2012 ರವರೆಗೆ ಅಂಕೋಲಾದಲ್ಲಿ ವಿಜಯ ಬ್ಯಾಂಕ್ ದಲ್ಲಿ ವ್ಯವಸ್ಥಾಪಕನಾಗಿ ಕೆಲಸ ನಿರ್ವಹಿಸಿರುತ್ತೇನೆ . ಆಗ ಲೋಕಾಯುಕ್ತ ಪೊಲೀಸ್ ನವರು ನರೇಂದ್ರ ಹಿತ್ತಲಮಕ್ಕಿ ಎನ್ನುವವರ ಖಾತೆಯ ಲೆಕ್ಕ ತಖ್ತೆಃಯನ್ನು ನೀಡುವಂತೆ ಕೇಳಿ ಪತ್ರ ಬರೆದಿದ್ದರು. ಅಲ್ಲದೇ ಅವರ ಠೇವಣಿ ವಿವರವನ್ನು ಸಹ ಕೇಳಿದ್ದರು. ನಾನು ಆ ಬಗ್ಗೆ ವಿವರವನ್ನು ಕೊಟ್ಟಿರುತ್ತೇನೆ. ಈಗ ಲೋಕಾಯುಕ್ತ ಕಚೇರಿಯಿಂದ ಬಂದ ಮೂರು ಪತ್ರಗಳನ್ನು ನೋಡಿರುತ್ತೇನೆ. ಆ ಪತ್ರಗಳನ್ನು ನಿ.ಪಿ. 175 ರಿಂದ 177 ಎಂದು ಗುರುತಿಸಲಾಯಿತು. ನಿ.ಪಿ. 178 ರಿಂದ 182 ನಾನು ಆ ಪತ್ರಗಳಿಗೆ ಸಂಬಂಧಿಸಿದಂತೆ ಕಳುಹಿಸಿದ ದಾಖಲಾತಿಯಾಗಿವೆ . ಅವುಗಳಲ್ಲಿ ನನ್ನ ರುಜು ಇವೆ . ಸಾಕ್ಷಿಯ ರುಜುವನ್ನು ನಿ.ಪಿ. 178(ಎ) ರಿಂದ 182(ಎ) ಎಂದು ಗುರುತಿಸಲಾಯಿತು. ನರೇಂದ್ರ ಹಿತ್ತಲ ಮಕ್ಕಿ ಪಡೆದಿದ್ದ ಸಾಲದ ಖಾತೆ ತಖ್ತೆಃ ಅವರ ಹೆಸರಿಗೆ ಇದ್ದ ಉಳಿತಾಯ ಖಾತೆ ವಿವರ , ಅವರ ಹೆಸರಿಗೆ ಇದ್ದ ಲಾಕರ್ ಸಂಖ್ಯೆ ವಿವರ , ಅವರ ಹೆಸರಿಗೆ ಇದ್ದ ಡೆಬಿಟ್ ಕಾರ್ಡ್ ವಿವರವನ್ನು ನಿ.ಪಿ. 178 ರಿಂದ 182 ರಡಿಯಲ್ಲಿ ಒದಗಿಸಿರುತ್ತೇನೆ. ನಿ.ಪಿ. 182 ರಂತೆ ಲಗತ್ತುಗಳನ್ನು ಅಳವಡಿಸಿದ್ದು ಅದು ಎರಡು ನೆರಳಚ್ಚು ಪ್ರತಿ ಪತ್ರದೊಂದಿಗೆ ಇದೆ .

**<u>ಪಾಟೀ ಸವಾಲುಃ  ಆರೋಪಿ ಪರ ವಕೀಲರಾದ ಶ್ರೀ ವಿ ಎನ್ ಎನ್ ರವರು</u>**

ಏನೂ ಇಲ್ಲ ಎಂದು ಹೇಳಿರುತ್ತಾರೆ.

**<u>ಮರು ವಿಚಾರಣೆಃ – ಇಲ್ಲ –</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

(ಡಿ.ಎಸ್. ವಿಜಯಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ